ಓ.ಎಸ್.117/2016 **ಪಿ.ಡಬ್ಲೂಃ 7**

ಸಾಕ್ಷಿಯನ್ನು ದಿಃ **17.10.2022** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಸಿ.ಆರ್..ವಕೀಲ**ರಿಂದ**

2 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದ ವಿಚಾರಗಳನ್ನು ನಾನು ತಿಳಿದುಕೊಂಡಿರುವುದಿಲ್ಲ. ಅದೆ ರೀತಿ ನನ್ನ ಪರ ವಕೀಲರು 2 ನೇ ಪ್ರತಿವಾದಿಯ ತಿದ್ದುಪಡಿ ಪ್ರತಿವಾದ ಪತ್ರಕ್ಕೆ ಏನೇಂದು ರಿಜೈಂಡರ್ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಂದುರವರೆ ಮುಖ್ಯ ವಿಚಾರಣಾ ಪತ್ರವನ್ನು ನಾನು ಓದಿದ್ದೆ. ನನ್ನ ತಂದೆ ತಮ್ಮ ಜೀವಿತಾವಧಿಯಲ್ಲಿ ತಾವು ಸ್ವಯರ್ಜಿತವಾಗಿ ಗಳಿಸಿದ್ದ ದಾವಾ ಸ್ವತ್ತುಗಳ ಬಗ್ಗೆ ಮುಂದೆ ತಮ್ಮ ಮಕ್ಕಳ ನಡುವೆ ಯಾವುದೆ ವ್ಯಾಜ್ಯ ಆಗದೆ ಇರಲಿ ಎಂಬ ಉದ್ದೇಶದಿಂದ ದಿಃ 24.02.2016 ರಂದು ಮರಣ ಶಾಸನವನ್ನು ಬರೆದಿಟ್ಟಿದ್ದಾರೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ದಾಖಲೆಯಲ್ಲಿರುವ ಫೋಟೋ ನನ್ನ ತಂದೆಯದಾಗಿರುವುದಿಲ್ಲ, ಅದನ್ನು ಸೃಷ್ಟಿ ಮಾಡಿಕೊಂಡಿದ್ದಾರೆ ಎಂದು ಸಾಕ್ಷಿ ಮುಂದುವರೆದು ನುಡಿಯುತ್ತಾರೆ. ನನ್ನ ತಂದೆಯ ಸ್ನೇಹಿತರ ಹೆಸರುಗಳು ನನಗೆ ಗೊತ್ತಿಲ್ಲ, ಹೆಸರು ಹೇಳಿದರೆ ಅವರನ್ನು ಗುರುತಿಸಬಲ್ಲೆ. ಹುಣಸೂರು ತಾಲ್ಲುಕಿನಲ್ಲಿ ಅಲ್ಲದೆ ನನ್ನ ತಂದೆಗೆ ಪಿರಿಯಾಪಟ್ಟಣ, ಹೆಚ್. ಡಿ.ಕೋಟೆ ಮತ್ತು ಮೈಸೂರುಗಳಲ್ಲಿ ಕೂಡ ಸ್ನೇಹಿತರು ಇದ್ದಾರೆ ಎಂದರೆ ಸರಿ. ಅವರುಗಳ ಹೆಸರು ನನಗೆ ಗೊತ್ತಿಲ್ಲ ಎಂದು ಸ್ವಯಂ ನುಡಿಯುತ್ತಾರೆ. ಹೆಚ್.ಡಿ. ಕೋಟೆ ತಾಲ್ಲೂಕಿನ ಗೊಲ್ಲನಬೀಡು ಗ್ರಾಮದ ಕೆಂಬೊರೇಗೌಡರ ಮಗ ಬೋರೆಗೌಡ ನನ್ನ ತಂದೆಯ ಸ್ನೇಹಿತರು ಎಂದರೆ ಅವರು ಸ್ನೇಹಿತರಲ್ಲ ನನ್ನ ತಂಗಿಯ ಗಂಡ ಎನ್ನುತ್ತಾರೆ.

ನಮ್ಮ ತಂದೆಗೆ ನಾನೊಬ್ಬಳೆ ಮಗಳು ಎಂದರೆ ಸರಿ. ಈಗ ಮೇಲೆ ಹೇಳಿದ ಬೋರೇಗೌಡರು ನನ್ನ ಚಿಕ್ಕಪ್ಪನ ಮಗಳ ಗಂಡ ಎನ್ನುತ್ತಾರೆ. ಸದರಿ ಬೋರೇಗೌಡರು ಮತ್ತು ನನ್ನ ತಂದೆ ತುಂಬಾ

ಅನ್ಯೋನ್ಯವಾಗಿದ್ದರು ಎಂದರೆ ಸರಿ. ಸದರಿ ಬೋರೇಗೌಡರು ನನ್ನ ತಂದೆಯ ಆತ್ಮೀಯ ಸ್ನೇಹಿತರಾಗಿದ್ದು ಅವರೊಂದಿಗೆ ನನ್ನ ತಂದೆಯ ಕಷ್ಟ ಸುಖಗಳನ್ನು ಹಂಚಿಕೊಳ್ಳುತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ದಾವಾ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಬಿಳಿಕೆರೆ ಗ್ರಾಮದ ಬಳಿ ಇರುವ ಬೆಂಕಿಪುರ ಗ್ರಾಮದ ಮಾಲನಾಯಕರ ಮಗ ರಾಮನಾಯಕ ಕೂಡ ನನ್ನ ತಂದೆಗೆ ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆಗೆ ಪೂರ್ವದಿಂದಲೆ ಈ ರಾಮನಾಯಕ ನನ್ನ ತಂದೆಗೆ ಸ್ನೇಹಿತರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆ ಆಗಿ 35 ವರ್ಷಗಳಾಗಿದೆ. ನನ್ನ ಮದುವೆ ಆದಾಗಿನಿಂದ ನಾನು ನನ್ನ ಗಂಡನ ಮನೆಯಲ್ಲಿಯೆ ವಾಸವಾಗಿದ್ದೇನೆ ಎಂದರೆ ನಾನು ಆಸ್ವಾಳು ಮತ್ತು ಕೋಟೆ ಎರಡೂ ಕಡೆಯಲ್ಲಿಯೂ ಇರುತ್ತೇನೆ. ನಾನು ಶನಿವಾರ, ಭಾನುವಾರದಂದು ನಾನು ನನ್ನ ನಮ್ಮ ತಂದೆ-ತಾಯಿ ಮನೆಗೆ ಬರುತ್ತಿದ್ದೆ ಮತ್ತು ಗಂಡನ ಮನೆಯಲ್ಲಿಯೂ ಇರುತ್ತಿದ್ದೆ. ರಜಾ ದಿನಗಳನ್ನು ಹೊರತು ಪಡಿಸಿ ಬೇರೆ ದಿನಗಳಲ್ಲಿ ನನ್ನ ತಂದೆ ಮನೆಯಲ್ಲಿ ಏನೇನು ನಡೆಯುತ್ತಿತು ಎಂದು ನನಗೆ ಗೊತ್ತಾಗುತ್ತಿರಲಿಲ್ಲ ಎಂದರೆ ಸರಿ. ಶನಿವಾರ ಭಾನುವಾರ ಹೊರತು ಪಡಿಸಿ ಬೇರೆ ದಿನಗಳಂದು ನನ್ನ ತಂದೆ ಮನೆಗೆ ಯಾರ್ಯಾರು ಬರುತ್ತಿದ್ದರು ಏನೇನು ಮಾತುಕತೆ ಮತ್ತು ವ್ಯವಹಾರ ನಡೆಯುತಿತ್ತು ಈ ಯಾವುದೆ ವಿಚಾರ ನನಗೆ ತಿಳಿಯುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆಯು ತಮ್ಮ ಸ್ನೇಹಿತರಾದ ರಾಮನಾಯಕ ಮತ್ತು ಬೋರೇಗೌಡರೊಂದಿಗೆ ಚರ್ಚಿಸಿ ಯಾರ್ಯಾರಿಗೆ ಏನೇನು ಆಸ್ತಿಗಳು ಹೋಗಬೇಕು ಎಂಬ ಬಗ್ಗೆ ವಿಲ್ ಬರೆಸಿದ್ದರು ಎಂದರೆ ಸರಿಯಲ್ಲ.

ನನ್ನ ತಂದೆ ದಿಃ 30.11.2013 ರಂದು ತೀರಿಹೋಗಿದ್ದಾರೆ. ನನ್ನ ತಂದೆ ಮರಣಾ ಹೊಂದಿದ ನಂತರ ಬೋರೇಗೌಡರು ಮತ್ತು ರಾಮನಾಯಕ ನಮ್ಮ ತಂದೆ ಮನೆಗೆ ಬಂದು ನನ್ನ, ಪ್ರತಿವಾದಿ 1 ಮತ್ತು 2 ರವರನ್ನು ಕುರಿತು ನಿಮ್ಮ ತಂದೆ ವಿಲ್ ಮಾಡಿ ಹೋಗಿದ್ದಾರೆ, ನೀವು ನಿಮ್ಮ ನಿಮ್ಮ ಆಸ್ತಿಗಳಿಗೆ ಬಂಬಂಧಪಟ್ಟಂತೆ ಖಾತೆ ಮಾಡಿಕೊಳ್ಳಬಹುದು ಎಂದು ತಿಳಿಸಿದರು ಎಂದರೆ ಸರಿಯಲ್ಲ. ಮೂಲ ಮರಣ ಶಾಸನ ಪತ್ರ ಪ್ರತಿವಾದಿ 1 ಮತ್ತು 2 ರವರಗೆ ಮನೆಯಲ್ಲಿ ಸಿಗದೆ ಇದ್ದ ಕಾರಣ ಅವರುಗಳು ಉಪ

ನೋಂದಣಾಧಿಕಾರಿಗಳ ಕಛೇರಿಗೆ ಅರ್ಜಿ ಸಲ್ಲಿಸಿ ಮರಣ ಶಾಸನದ ದೃಡೀಕೃತ ಪ್ರತಿಯನ್ನು ಪಡೆದುಕೊಂಡು ಖಾತೆಗಾಗಿ ಸಂಬಂಧಪಟ್ಟ ಕಛೇಗೆ ಅರ್ಜಿ ಕೊಟ್ಟರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿ ರೀತ್ಯಾ ಪ್ರತಿವಾದಿ 1 ಮತ್ತು 2 ರವರ ಹೆಸರಿಗೆ ನಿಪಿ. 1 ರಿಂದ 5, 8 ರಿಂದ 17 ಮತ್ತು 48 ರ ರೀತ್ಯಾ ಖಾತೆ ಬದಲಾವಣೆ ಆಗಿದೆ ಎಂದರೆ ಸರಿಯಲ್ಲ. ನಾನೆ ಹಾಜರು ಪಡಿಸಿರುವ ಈ ಮೇಲ್ಕಂಡ ದಾಖಲೆಗಳ ರೀತ್ಯಾ ಪ್ರತಿವಾದಿ 1 ಮತ್ತು 2 ರವರಿಗೆ ಖಾತೆ ವರ್ಗಾವಣೆಯಾಗಿದೆ ಎಂದರೆ ನಾನು ಯಾವುದಕ್ಕೂ ಸಹಿ ಮಾಡಿಲ್ಲ ಎನ್ನುತ್ತಾರೆ. ಅದೇ ರೀತಿ ನಿಪಿ. 53 ರಿಂದ 54 ರ ರೀತ್ಯಾ ಎಂ.ಆರ್. ಹೆಚ್. 13/2013-14, ಎಂ.ಆರ್. ಹೆಚ್. 7/2014-15, ಎಂ.ಆರ್. ಹೆಚ್. 28/2013-14 ರಂತೆ 1 ಮತ್ತು 2 ನೇ ಪ್ರತಿವಾದಿ ಹೆಸರಿಗೆ ಮ್ಯಾಟೇಶನ್ ಆಗಿದೆ ಎಂದರೆ ಅವುಗಳನ್ನೆಲ್ಲಾ ಅವರು ಸೃಷ್ಟಿಮಾಡಿಕೊಂಡಿದ್ದಾರೆ, ನನ್ನನ್ನು ಯಾವುದಕ್ಕೂ ಕರೆದಿಲ್ಲ ಎನ್ನುತ್ತಾರೆ. ನನ್ನ ತಂದೆ ವಿಲ್ ಅನ್ನು ಬರಯುವಾಗ ತಮ್ಮ ಯಾವ ಮಕ್ಕಳನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಿರಲಿಲ್ಲ, ತಮ್ಮ ಸ್ನೇಹಿತರನ್ನು ಕರೆದುಕೊಂಡು ಹೋಗಿ ತಮ್ಮ ಸ್ವಯಾರ್ಜಿತ ಆಸ್ತಿಗಳ ಬಗ್ಗೆ ಈ ವಿಲ್ ಬರೆದಿದ್ದಾರೆ ಎಂದರೆ ಸರಿಯಲ್ಲ, ಅವೆಲ್ಲಾ ಪಿತ್ರಾರ್ಜಿತ ಆಸ್ತಿಗಳು ಎನ್ನುತ್ತಾರೆ.

ಅನ್ನರಾಯಪುರದ ಗ್ರಾಮದ ಸರ್ವೆ ನಂ. 60/47 ಪಿ 1 ರ 4 ಎಕರೆ ಜಮೀನು, ಸರ್ವೆ ನಂ. 61/68 ಪಿ 1 ಎಕರೆ ಜಮೀನು, ಅಸ್ವಾಳು ಗ್ರಾಮದ ಸರ್ವೆ ನಂ. 71/3 ರಲ್ಲಿ 1 ಎಕರೆ 2 ಗುಂಟೆ ಜಮೀನು, ಸರ್ವೆ ನಂ. 71/5 ರಲ್ಲಿ 19 ಗುಂಟೆ, ಸರ್ವೆ ನಂ. 73/5 ರಲ್ಲಿ 35 ಗುಂಟೆ ಜಮೀನುಗಳು ಎಂ.ಆರ್. 4/90-91 ರಲ್ಲಿ ನನ್ನ ಹೆಸರಿಗೆ ನನ್ನ ತಂದೆ ಖಾತೆ ಮಾಡಿಸಿದ್ದಾರೆ ಎಂದು ಸದರಿ ಸ್ವತ್ತುಗಳನ್ನು ನನ್ನ ಭಾಗಕ್ಕೆ ಬಿಡಲಾಗಿದೆ ಎಂದು ವಿಲ್ ನ 4 ನೇ ಪ್ಯಾರಾದಲ್ಲಿ ನಮೂದಿಸಿದ್ದಾರೆ ಎಂದರೆ ಸುಳ್ಳು ಅವೆಲ್ಲಾ ನನ್ನ ಪತಿ ಖರೀದಿಸಿದ ಸ್ವತ್ತುಗಳಾಗಿವೆ ಎನ್ನುತ್ತಾರೆ. ಸದರಿ ಸ್ವತ್ತುಗಳನ್ನು ನನ್ನ ಪತಿ ನನ್ನ ಹೆಸರಿನಲ್ಲಿ ಕೊಂಡಿದ್ದಾರೆ , ಅವುಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನಾನು ಹಾಜರು ಪಡಿಸಿರುವ ನಿಪಿ. 1 ರಿಂದ 67 ರ ಪೈಕಿ ಇರುವ ದಾಖಲೆಗಳಲ್ಲಿ ನನ್ನ ಪತಿ ಕೊಂಡಿದ್ದಾರೆ ಎಂದು ತೋರಿಸಿರುವ ಯಾವ ದಾಖಲೆ ಇದೆ ಎಂದರೆ ಸಾಕ್ಷಿ ನನಗೆ ಈಗ ಈ ದಾಖಲೆಗಳನ್ನು ನೋಡಿ ಹೇಳಲು ಬರುವುದಿಲ್ಲ ಆದರೆ

ಹಾಜರು ಪಡಿಸಿರುವುದು ಸತ್ಯ ಎನ್ನುತ್ತಾರೆ. ಮೇಲೆ ಹೇಳಿದಂತಹ ಅಸ್ವಾಳು ಗ್ರಾಮದ 3 ಐಟಂ ಸ್ವತ್ತುಗಳನ್ನು ನಿಪಿ. 61 ರ ಪ್ರಕಾರ ದಿಃ 03.10.2015 ರಂದು ಹನುಮಂತಶೆಟ್ಟಿ ರವರ ಮಗ ಸಂಜೀವಶೆಟ್ಟಿ ರವರಿಗೆ ನಾನು ಮತ್ತು ನನ್ನ ಮಕ್ಕಳು ಸೇರಿ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ, ಸಹಿ ಮಾಡಿರುವುದು ನಿಜ ಅದು ನನ್ನ ತಾತನ ಸ್ವತ್ತು ನನ್ನ ಇಬ್ಬರೂ ಅಣ್ಣಂದಿರು ಸೇರಿ ಸಹಿ ಮಾಡಿಸಿ ಅವರೆ ಮಾರಾಟ ಮಾಡಿದ್ದಾರೆ. ಆ ಸಮಯದಲ್ಲಿ ನನ್ನ ತಂದೆಗೆ ಪ್ಯಾರಾಲಿಸಿಸ್ ಆಗಿ ಅವರು ಹುಷಾರು ತಪ್ಪಿದ್ದರು ಎಂದು ನುಡಿದು ಪುನಃ ನನ್ನ ತಂದೆ ಮರಣ ಹೊಂದಿದ ನಂತರ ನನ್ನ ಅಣ್ಣಂದಿರು ಮಾರಾಟ ಮಾಡಿಸಿದ್ದಾರೆ ಎನ್ನುತ್ತಾರೆ. ನನ್ನ ತಂದೆ ಮಾರಣ ಹೊಂದಿದ 2-3 ವರ್ಷಗಳ ನಂತರ ಸದರಿ ಸ್ವತ್ತುಗಳು ಮಾರಾಟ ಆಗಿವೆ ಎಂದರೆ ಸರಿ.

**ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.